ಪರಿಣಾಮ ಜಾಸ್ತಿಯಿರುತ್ತದೆ. ಪೂಜೆಗೆ ಬೇರೆ ಐದಾರು ಜನ ಪುರೋಹಿತರನ್ನೂ ಕರೆಸಬೇಕಾಗುತ್ತದೆ ಮತ್ತು ಬ್ರಾಹ್ಮಣರಿಗೆ ದಾನವನ್ನೂ ಕೊಡಬೇಕಾಗುತ್ತದೆ. ಇಂಥ ಪೂಜೆ ಮಾಡುವುದರಲ್ಲಿ ಹಿತ್ತಲ ಮನೆಯ ನರಸಿಂಹ ಭಟ್ಟರನ್ನು ಬಿಟ್ಟರೆ ಈ ಮಹಾಬಲೇಶ್ವರ ಭಟ್ಟನೇ ಟಾಪ್. ಮತ್ತಿನ್ನೆಂಥಕ್ಕೆ ಸಾಕ್ಷಾತ್ ಆ ಈಶ್ವರನ ಹೆಸರನ್ನು ನನಗೆ ಇಟ್ಟಿರೋದು. ಇಲ್ಲಿ ಕೆಲವರು ಸರಿಯಾಗಿ ಪಿಂಡ ಕಟ್ಟಲೂ ಬರದವರು ಚಿಲ್ಲರೆ ಕಾಸಿಗೆಲ್ಲ ಹದಿನೈದಿಪ್ಪತ್ತು ನಿಮಿಷಗಳಲ್ಲಿ ಪೂಜೆ ನೆರವೇರಿಸುತ್ತಾರೆ. ನೀವು ಒಪ್ಪಿದರೆ ಇಪ್ಪತ್ತೈದು ಸಾವಿರ ರೂಪಾಯಿಯ ಪೂಜೆಯನ್ನು ಹದಿನೆಂಟು ಸಾವಿರ ರೂಪಾಯಿಗೆ ಮುಗಿಸಿಕೊಡುತ್ತೇನೆ. ಒಂದು ತುಂಡು ಪಂಚೆಯೊಂದಿಗೆ ನಾಳೆ ಬೆಳಗ್ಗೆ ಎಂಟು ಗಂಟೆಗೆ ಬಂದರೆ ಮಧ್ಯಾಹ್ನ ಒಂದೂವರೆ ಗಂಟೆಗೆಲ್ಲ ಬ್ರಾಹ್ಮಣರ ಜೊತೆಯಲ್ಲಿ ಊಟದೊಂದಿಗೆ ನಿಮ್ಮನ್ನು ಬಿಟ್ಟುಕೊಡುತ್ತೇವೆ. ಕೇವಲ ಹದಿನೈದು ದಿನಗಳಲ್ಲಿ ಎಫೆಕ್ಟ್ ಕಾಣದೆ ಹೋದರೆ ಕೇಳಿ. ಮತ್ತೆ ನೀವು ನಿಮ್ಮ ಪರಿಚಯದವರನ್ನು ನನ್ನ ಬಳಿಯೇ ಕಳಿಸಿಕೊಡುತ್ತೀರಿ. ಮತ್ತೆ ಕ್ಯಾಶೇನೂ ಬೇಕಿಲ್ಲ. ಫೋನ್ ಪೇ ಆದರೂ ಆದೀತು...''

ಮಹಾಬಲೇಶ್ವರ ಭಟ್ಟರ ಮಾತುಗಳಿಗೆ ಅಲ್ಲಮಪ್ರಭು ಸಮ್ಮೋಹನಗೊಂಡವನಂತೆ ಕರಗಿಹೋಗಿದ್ದ. ಭಟ್ಟರ ಕಣ್ಣುಗಳಲ್ಲಿನ ತೇಜಸ್ಸು ಅವನನ್ನು ಕಟ್ಟಿಹಾಕಿತ್ತು. ಇಂಥದ್ದೊಂದು ಪೂಜೆಯನ್ನು ಅಪ್ಪ ಇಲ್ಲಿಗೆ ಬಂದು ಬಹಳ ಹಿಂದೆಯೇ ಮಾಡಿಸಿದ್ದರೆ ತನಗೆ ಮದುವೆಯಾಗಿ, ಒಂದೆರಡು ಮಕ್ಕಳೂ ಇರುತ್ತಿದ್ದವೇನೋ ಎಂಬ ಜಿಜ್ಞಾಸೆಗೆ ಬಿದ್ದ ಅಲ್ಲಮಪ್ರಭು ನಾಳೆಯೇ ಪೂಜೆ ಮಾಡಿಸಿ ತೀರಬೇಕೆಂದು ಬ್ಯಾಗಿಗೆ ಕೈ ಇಟ್ಟು ಎರಡು ಸಾವಿರ ರೂಪಾಯಿಯ ಹತ್ತು ನೋಟುಗಳನ್ನು, ಐನೂರು ರೂಪಾಯಿಯ ಎರಡು ನೋಟುಗಳನ್ನು ಮಹಾಬಲೇಶ್ವರ ಭಟ್ಟರ ಕೈಯಲ್ಲಿ ಇಟ್ಟು, ''ಈ ಇಪ್ಪತ್ತೊಂದು ಸಾವಿರ ಇಟ್ಟುಕೊಳ್ಳಿ, ಗಣಪನಿಗೆ ಇಪ್ಪತ್ತೊಂದರ ಸಂಖ್ಯೆ ಶ್ರೇಷ್ಠವಾದದ್ದು. ಯಾವುದೇ ಪೂಜೆಯನ್ನಾದರೂ ಶುರುಮಾಡುವುದು ಗಣಪನ ಪೂಜೆಯಿಂದಲೇ ಅಲ್ಲವೆ? ನಾಳೆ ಬೆಳಗ್ಗೆ ಎಂಟು ಗಂಟೆಗೆ ಬರುತ್ತೇನೆ.'' ಎಂದು ಎದ್ದು ನಿಂತವನು, ''ಭಟ್ಟರೆ ಇವೊತ್ತು ಗೋಕರ್ಣದ ಬೀಚುಗಳನ್ನು ನೋಡಿಬಿಡುತ್ತೇನೆ. ಅಂದಹಾಗೆ, ಇಂದು ಮದ್ಯ ಮತ್ತು ಮೀನನ್ನು ಉಪಯೋಗಿಸಬಹುದೆ?'' ಎಂದು ಕೇಳಿದ್ದ. ಭಟ್ಟರು ನಗುತ್ತಾ, ''ಮನುಷ್ಯನೇ ರಕ್ತ, ಮಾಂಸಗಳಿಂದ ಸೃಷ್ಟಿ ಆಗಿರೋದು ಅಲ್ಲವೇ ಅಲ್ಲಮ. ಆಹಾರದ ಬಗ್ಗೆ ಯಾವ ದೇವರೂ ಆಕ್ಷೇಪ ಮಾಡಲಾರ. ಹಿಂದೆ ಬ್ರಾಹ್ಮಣರೂ ಯಜ್ಞ ಯಾಗಾದಿಗಳಲ್ಲಿ ಪ್ರಾಣಿಗಳನ್ನು ಬಲಿ ಕೊಡುತ್ತಿದ್ದರಲ್ಲದೆ, ಸುರಪಾನಕ್ಕೆ ಅಮೃತ ಎಂದು ಹೆಸರಿಟ್ಟು ಸೇವಿಸಿ ಜಿಂಕೆ ಮಾಂಸದ ಭಕ್ಷ್ಯಗಳನ್ನು ಸ್ವೀಕರಿಸುತ್ತಿರಲಿಲ್ಲವೇ. ಆತ್ಮವೊಂದು ಶುದ್ಧಿಯಾಗಿರಬೇಕಷ್ಟೆ. ಆದ್ದರಿಂದಲೇ ಹಿರಿಯರ ಆತ್ಮಗಳನ್ನು ಆರಾಧಿಸಬೇಕಾಗಿರೋದು. ನಿರ್ಮಲ ಮನಸ್ಸಿನಿಂದ ನಾಳೆ ಇಲ್ಲಿಗೆ ಬಾ...'' ಎಂದು ಬೀಳ್ಕೊಟ್ಟಿದ್ದರು. ಆತ್ಮಶುದ್ಧಿಯ ಬಗ್ಗೆ ಆಲೋಚಿಸುತ್ತಾ ಅಲ್ಲಮಪ್ರಭು ಜಗುಲಿಯನ್ನಿಳಿದು ರಸ್ತೆಗೆ ಕಾಲೂರಿದ್ದ. ಟ್ಯಾಕ್ಸಿಯೊಂದನ್ನು ಮಾಡಿಕೊಂಡು ಒಂದೆರಡು ಬೀಚುಗಳನ್ನು ಸುತ್ತಿಕೊಂಡು ಸಂಜೆ ನಾಲ್ಕರ ವೇಳೆಗೆ ಓಂ ಬೀಚ್ ತಲುಪಿದ್ದ. ಸೂರ್ಯ ಮುಳುಗುವವರೆಗೂ ಬೀಚಿನಲ್ಲಿ ಸುತ್ತಾಡಿ ಉಳಿದುಕೊಳ್ಳಲು ಬೀಚ್ ರೆಸಾರ್ಟ್‌ನಲ್ಲಿ ರೂಮು ಮಾಡಿದವನು ಫ್ರೆಶಪ್ ಆಗಿ ಗಾರ್ಡನ್ ರೆಸ್ಟೋರೆಂಟ್‌ನಲ್ಲಿ ಕುಳಿತು ಅಂಜಲ್, ಕಾಣೆ ಫಿಶ್ ಫ್ರೈ ನಂಜಿಕೊಂಡು ತಣ್ಣನೆಯ ಎರಡು ಕಿಂಗ್ ಫಿಶರ್ ಬಿಯರ್ ಖಾಲಿ ಮಾಡಿದ್ದ. ಊಟಕ್ಕೆಂದು ಕ್ವಾರ್ಟರ್ ಮಟನ್ ಬಿರಿಯಾನಿ ತಿಂದು ಮಲಗಿದವನಿಗೆ ನಿದ್ದೆ ಆವರಿಸಿದ್ದೇ ಗೊತ್ತಾಗಿರಲಿಲ್ಲ.

ಅಲ್ಲಮಪ್ರಭುವಿಗೆ ಎಚ್ಚರವಾದಾಗ ಬೆಳಗಿನ ಐದು ಗಂಟೆಯಾಗಿತ್ತು. ಕಡಲ ಕಡೆಯಿಂದ ಅಲೆಗಳ ಸದ್ದು ಬಹಳ ಹಿತವಾಗಿ ಕೇಳಿಸುತ್ತಿತ್ತು. ಮೂತ್ರ ವಿಸರ್ಜನೆ ಮಾಡಿ ಮತ್ತೆ ಮಲಗಿದವನಿಗೆ ನಿದ್ದೆ ಬಂದಿರಲಿಲ್ಲ. ಅಲೆಗಳ ಸದ್ದಿನೊಳಗೆ ನೀರ್ಗಳ್ಳಿಯ ಮೀನಾಕ್ಷಿ ಹೆಗಡೆ ತೇಲಿ ಬರುತ್ತಿರುವಂತೆ